**<u>ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು :- ಶ್ರೀ ಎಸ್ ಎನ್ ಪಿ ವಕೀಲರಿಂದ 2 ನೇ ಎದುರುದಾರರ ಪರವಾಗಿ.</u>**

5. ನನಗೆ 5 ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಮಗ ಇರುತ್ತಾನೆ. ಅರ್ಜಿದಾರ ನನ್ನ ಕೊನೆಯ ಮಗ ಇರುತ್ತಾನೆ. ಆತ ಎಸ್.ಎಸ್.ಎಲ್. ಸಿ. ವಿದ್ಯಾಭ್ಯಾಸ ಮಾಡಿರುತ್ತಾನೆ. ಸುಮಾರು 3 ವರ್ಷಗಳ ಹಿಂದೆ ಎಸ್.ಎಸ್.ಎಲ್.ಸಿ. ಪಾಸ್ ಆಗಿರುತ್ತಾನೆ. ಆತನ ಜನ್ಮ ದಿನಾಂಕಃ 28.10.2007 ಎಂದರೆ ಸರಿ.

6. ಅಪಘಾತದ ಸಮಯದಲ್ಲಿ ನನ್ನ ಮಗ 1 ನೇ ಎದುರುದಾರನ ಬೈಕ್ ಮೇಲೆ ಸವಾರಿ ಮಾಡುತ್ತಿದ್ದ. ಸದರಿ ವಾಹನದ ಕೆಎ-16-ಇಸಿ-0054 ಇರುತ್ತದೆ . ಕೆ-16-3647 ಬೈಕ್ ಚಾಲಕ ನನ್ನ ಮಗನ ಬೈಕ್ ಗೆ ಡಿಕ್ಕಿ ಪಡೆಸಿ ಅಪಘಾತ ಮಾಡಿರುತ್ತಾನೆ. ದೂರನ್ನು ಯಾರು ದಾಖಲಿಸಿರುತ್ತಾರೆ ಎಂದು ಗೊತ್ತಿಲ್ಲ. ಕೆ-16-3647 ಬೈಕ್ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದು ಪೋಲೀಸರು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಕೆಎ-16-ಇಸಿ-0054 ವಾಹನವನ್ನು 1 ನೇ ಎದುರುದಾರ ಓಡಿಸುತ್ತಿದ್ದ. ಆತನಿಗೆ ಚಾಲನ ಪರವಾನಿಗೆ ಪತ್ರ ಇದ್ದ ಬಗ್ಗೆ ಗೊತ್ತಿಲ್ಲ. ಅಪಘಾತ ವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಅಪಘಾತವಾದ ಮೇಲೆ ನನ್ನ ಮಗನನ್ನು ಚಳ್ಳಕೆರೆ ಆಸ್ಪತ್ರೆಯಲ್ಲಿ ನೋಡಿರುತ್ತೇನೆ. ಅಲ್ಲಿ ಯಾವುದೇ ಎಕ್ಸ್ ರೇ ಯನ್ನು ತೆಗೆದಿರುವುದಿಲ್ಲ. ನಂತರ ಚಿತ್ರದುರ್ಗದ ಆಸ್ಪತ್ರೆಗೆ ಕಳುಹಿಸಿರುತ್ತಾರೆ. ಚಿತ್ರದುರ್ಗ ಬಸವರಾಜ್ ವೈದ್ಯರು ಚಿಕಿತ್ಸೆ ನೀಡಿರುತ್ತಾರೆ. 14 ದಿನ ಒಳರೋಗಿಯಾಗಿ ಚಿಕಿತ್ಸೆ ಪಡೆದಿರುತ್ತಾನೆ. ದಾವಣಗೆರೆ ಹಾಗೂ ಬಸವೇಶ್ವರ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾನೆ. ಚಿತ್ರದುರ್ಗ ಸಕಾರಿ ಹಗೂ ಬಸವೇಶ್ವರ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಚಿಕಿತ್ಸೆ ಪಡೆದ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ.

7. ಔಷದೋಪಾಚಾರಕ್ಕೆ ರೂ.3 ಲಕ್ಷ ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನ ಊಟ ವಸತಿಗೆ ರೂ.20,000/- ಖರ್ಚು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವೆಂಕಟ ಶಿವ ರೆಡ್ಡಿ ಹತ್ತಿರ ಒಂದು ಸಲ ಚಿಕಿತ್ಸೆ ಪಡೆದಿರುತ್ತಾನೆ. ಸದರಿ ದಿನ ಅಂಗ ನ್ಯೂನ್ಯತೆ ಪ್ರಮಾಣ ಪತ್ರವನ್ನು ನೀಡಿರುತ್ತಾರೆ ಎಂದರೆ ಸರಿ. ಅಪಘಾತದಿಂದ ನನ್ನ ಮಗನಿಗೆ ಅಂಗ ನ್ಯೂನ್ಯತೆ ಉಂಟು ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಗಾಯಗಳಿಂದ ಆತ

ಮೊದಲಿನ ಹಾಗೆ ಕೆಲಸ ಮಾಡಲು ಆಗುವುದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತ ಈಗ ವಿದ್ಯಾಭ್ಯಾಸ ಮಾಡುತ್ತಿಲ್ಲ ಹಾಗೂ ಯಾವುದೇ ಕೆಲಸ ಮಾಡುತ್ತಿಲ್ಲ. ಅಪಘಾತದಿಂದ ಆರ್ಥಿಕ ನಷ್ಟ ವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯಲು ಸುಳ್ಳು ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ..

8. ಅರ್ಜಿದಾರ ಆಸ್ಪತ್ರೆಗೆ ಸೇರಿದ್ದ ಕಾರಣ ತಡವಾಗಿ ದೂರನ್ನು ದಾಖಲಿಸಿರುತ್ತೇನೆ. 1 ನೇ ಎದುರುದಾರನ ವಾಹನ 2 ನೇ ಎದುರುದಾರನ ಕಂಪನಿಯಲ್ಲಿ ವಿಮೆ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ.. ಅಪಘಾತದ ದಿನ ವಿಮೇ ಚಾಲ್ತಿಯಲ್ಲಿ ಇಲ್ಲದೇ ಇರುವುದರಿಂದ 2 ನೇ ಎದುರುದಾರ ಪರಿಹಾರ ನೀಡಲು ಭಾದ್ಯಸ್ಥನಿರುವುದಿಲ್ಲ ಎಂದರೆ ಸರಿಯಲ್ಲ.. 2 ನೇ ಎದುರುದಾರ ಅವಶ್ಯಕ ಪಕ್ಷಗಾರು ಇರದಿದ್ದರೂ ಅವರನ್ನು ಈ ದಾವೆಯಲ್ಲಿ ಸೇರಿಸಲಾಗಿದೆ ಎಂದರೆ ಸರಿಯಲ್ಲ. ವಕೀಲರಿಗೆ ದಾವೆಯನ್ನು ದಾಖಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಅಪಘಾತದ ದಿನ ವಿಮೇ ಚಾಲ್ತಿಯಲ್ಲಿದ ಬಗ್ಗೆ ದಾಖಲಾತಿಯನ್ನು ಸಲ್ಲಿಸಿರುವುದಿಲ್ಲ.

**ಪಾಟೀ ಸವಾಲು ಃ- 1 ನೇ** ಎದುರುದಾರರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
**ಮತ್ತು ಎ.ಎಂ.ಎ.ಸಿ.ಟಿ, ಚಿತ್ರದುರ್ಗ**